ಪಿ.ಸಿ.ಆರ್.ನಂ.58/2026
ಪಿ.ಡಬ್ಲ್ಯೂ-1

<u>ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ</u>
<u>ದಂಡಾಧಿಕಾರಿಗಳು ನ್ಯಾಯಾಲಯ, ಕಿತ್ತೂರು.</u>

ದಿನಾಂಕಃ 06.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಫಿರ್ಯಾದುದಾರರ ಪ್ರಮಾಣೀಕೃತ ಹೇಳಿಕೆಃ ಶ್ರೀ ಪಿ ಬಿ ಟಿ ವಕೀಲರಿಂದಃ</u>**

ಈ ಪ್ರಕರಣದಲ್ಲಿ ನಾನು ಫಿರ್ಯಾಧಿಯಾಗಿರುತ್ತೇನೆ. ಈ ದಿನ ಪ್ರಮಾಣೀಕೃತ ಹೇಳಿಕೆಯನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದು, ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಹಾಗೂ ಅದರಲ್ಲಿರುವ ಎಲ್ಲಾ ಅಂಶಗಳನ್ನು ನಾನು ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಹಾಗೂ ಅದು ಸತ್ಯದಿಂದ ಕೂಡಿರುತ್ತದೆ.

1. ಆರೋಪಿಯು ನನಗೆ ನೀಡಿದ ದಿಃ 06.03.2026 ರ ಚೆಕ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಅದರಲ್ಲಿರುವ ಆರೋಪಿಯ ಸಹಿಯನ್ನು ನಿಪಿ-1(ಎ) ಎಂದು,
2. ದಿಃ 09.03.2026 ರಂದು ಬ್ಯಾಂಕ್ ರವರು ನೀಡಿದ ಹಿಂಬರಹವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು,
3. ನಾನು ನನ್ನ ವಕೀಲರ ಮುಖಾಂತರ ನೀಡಿರುವ ನೋಟಿಸ್ಸು ದಿಃ 16.03.2026 ರ ಕಚೇರಿಯ ಪ್ರತಿಯನ್ನು ನಿಪಿ-3 ಎಂದು,
4. ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-4 ಎಂದು,
5. ಹಿಂದುರುಗಿ ಬಂದ ಅಂಚೆ ಲಕೋಟೆಯನ್ನು ತೆರೆದು ನೋಡಲಾಗಿ

ಅಂಚೆ ಲಕೋಟೆಯನ್ನು ನಿಪಿ-5 ಎಂದು ಮತ್ತು ಅದರೊಳಗೆ ಇದ್ದ ಮೂಲ ನೋಟಿಸ್ಸನ್ನು ನಿಪಿ-5(ಎ) ಎಂದು,

6. ರೆಜುಲೇಶನ ಪ್ರತಿಯನ್ನು ನಿಪಿ-6 ಎಂದು,
7. ಸಂಘ ನೋಂದಣಿ ಪ್ರಮಾಣ ಪತ್ರವನ್ನು ನಿಪಿ-7 ಎಂದು ಗುರುತಿಸಲಾಯಿತು.

**ಮೇಲ್ಕಂಡ ಸಕಾರಣಗಳಿಂದ ಆರೋಪಿಯ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಪ್ರಾರ್ಥಿಸುತ್ತೇನೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಮಹಮ್ಮದ ಅಲಿ ನಾಯಕ)
ಪ್ರ.ದ.ನ್ಯಾ.ದ.ಕಿತ್ತೂರು.